

ವ್ಯಕ್ತಿಯ ಸಾವಿನ ನಂತರವೂ ಆತ್ಮ ಜೀವಂತವಾಗಿರುತ್ತದೆ ಎನ್ನುವುದು ಕೆಲವರ ನಂಬಿಕೆ. ಇಂಥದೊಂದು ನಂಬಿಕೆಗಳು ದೇಶದ ರಕ್ಷಣಾಪಡೆಯಲ್ಲೂ ಇದೆ. ಭಾರತ–ಚೀನಾ ಗಡಿಭಾಗದಲ್ಲಿ ಸಿಪಾಯಿಯೊಬ್ಬನ ಆತ್ಮ ಈಗಲೂ ಪಹರೆ ನಡೆಸುತ್ತಿದೆ ಎನ್ನುವ ನಂಬಿಕೆಯಿದೆ. ಆ ಸೈನಿಕನಿಗೆ ಮಂದಿರವನ್ನೂ ನಿರ್ಮಿಸಲಾಗಿದೆ.

■ ಎಮ್.ಎನ್. ಜೋಶಿ





ಹೊಸತಾಗಿ ಕಟ್ಟಿಸಿದ ಬಾಬಾ ಮಂದಿರವು ಮೂರು ಗರ್ಭಗುಡಿಗಳನ್ನು ಹೊಂದಿದ್ದು, ಮಧ್ಯದ ಗರ್ಭಗುಡಿಯಲ್ಲಿ ಬಾಬಾನ ದೊಡ್ಡ ಫೋಟೊ ಇದೆ. ಅದರ ಜೊತೆಗೆ ಹಿಂದೂ ದೇವತೆಗಳ ಫೋಟೊ, ಮತ್ತು ಸಿಖ್ ಗುರುಗಳ ಫೋಟೊಗಳಿವೆ. ಬಲಭಾಗದ ಗರ್ಭಗುಡಿಯಲ್ಲಿ, ಬಾಬಾ ಬಳಸುತ್ತಿದ್ದ ಬಟ್ಟೆ, ಬೂಟು, ಚಪ್ಪಲಿ, ಹಾಸಿಗೆ, ಮಿಲಿಟರಿ ಸಮವಸ್ತ್ರ ಮುಂತಾದವುಗಳಿವೆ. ಎಡಭಾಗದ ಗರ್ಭಗುಡಿಯಲ್ಲಿ ನೀರು ತುಂಬಿದ ಬಹಳಷ್ಟು ಬಾಟಲಿಗಳಿವೆ.

ಪ್ರತಿವರ್ಷ ಅಕ್ಟೋಬರ್ 27ರ 'ಕಾಲ್ದಳ ದಿನಾಚರಣೆ'ಯಂದು, ಅಲ್ಲಿರುವ ಭಾರತೀಯ ಸೈನಿಕರು ಬಾಬಾ ಹಾಗೂ ಯುದ್ಧದಲ್ಲಿ ಪ್ರಾಣತೆತ್ತ ನಮ್ಮ ವೀರ ಸೈನಿಕರ ಸ್ಮರಣಾರ್ಥ ಸಮಾಧಿಗೆ ಹೂಮಾಲೆ ಅರ್ಪಿಸುತ್ತಾರೆ. ಪ್ರತಿ ಭಾನುವಾರ ಮತ್ತು ಮಂಗಳವಾರ ಬಾಬಾಮಂದಿರದಲ್ಲಿ ಪೂಜೆ ಹಾಗೂ ಪ್ರಸಾದರೂಪದಲ್ಲಿ ಅನ್ನಸಂತರ್ಪಣೆ ನಡೆಯುತ್ತದೆ.

ಸಾವಿನ ನಂತರವೂ ಬಾಬಾ, ಸೈನಿಕನ ಕರ್ತವ್ಯ ನಿರ್ವಹಿಸುತ್ತಿದ್ದಾನೆಂದು ಅವನ ಕುಟುಂಬದವರಿಗೆ ಸೈನ್ಯದಲ್ಲಿ ಒಂದು ಹುದ್ದೆಯನ್ನೂ ನೀಡಲಾಗಿದೆ. ಬಾಬಾಗೆ, ಪ್ರತಿವರ್ಷ ಎರಡು ತಿಂಗಳು ರಜೆಯಿದ್ದು, ಆತ ಬಳಸುತ್ತಿದ್ದ ಸಕಲ ವಸ್ತುಗಳ ಜೊತೆಗೆ ಬಾಬಾನನ್ನು ಅವರ ಊರಿಗೆ ರೈಲಿನ ಮೂಲಕ ಕಳುಹಿಸುತ್ತಿದ್ದರು. ಅವನಿಗಾಗಿ ಒಂದು ಬೋಗಿಯನ್ನು ಕಾಯ್ದಿರಿಸಿ, ಜೊತೆಗೆ ಮೂವರು ಸೈನಿಕರು ಹೋಗುತ್ತಿದ್ದರು. ಬಾಬಾ, ಊರಿಗೆ ಹೋಗಿಬರುವುದು ಒಂದು ಧಾರ್ಮಿಕ ವಿಧಿಯ ರೂಪ ತಳೆಯತೊಡಗಿತಲ್ಲದೆ, ಈ ಸಂದರ್ಭದಲ್ಲಿ ಜನಸ್ತೋಮವೇ ಸೇರತೊಡಗಿತು. ವಿಚಾರವಾದಿಗಳು ಇದೊಂದು ಮೂಢನಂಬಿಕೆಯೆಂದು ವಾದಿಸಿ, ಇಂತಹ ಮೂಢ ನಂಬಿಕೆ ಸೈನ್ಯದಲ್ಲಿರಕೂಡದೆಂದು ಕೋರ್ಟಿನ ಬಾಗಿಲನ್ನು ತಟ್ಟಿದರು. ನ್ಯಾಯಾಲಯದ ಆದೇಶದಂತೆ ಈ ಬಗೆಯ ವಿಧಿಯನ್ನು ಈಗ ನಿಲ್ಲಿಸಲಾಗಿದೆ.

ಬಾಬಾ ಮಂದಿರದ ಕೋಣೆಯನ್ನು ಪ್ರತಿದಿನ ಗುಡಿಸಿ, ಬೂಟ್ಸುಗಳನ್ನು ಪಾಲಿಶ್ ಮಾಡಿ, ಹಾಸಿಗೆ ಸರಿಪಡಿಸಿ, ಇಸ್ತ್ರಿಮಾಡಿದ ಸಮವಸ್ತ್ರಗಳನ್ನು ಇಟ್ಟಿರುತ್ತಾರೆ.

## ಸೈನಿಕರ-ಜನರ ಶ್ರದ್ಧಾಕೇಂದ್ರ

ಬಾಬಾ ಮಂದಿರವು ಜನರ ಹಾಗೂ ಸೈನಿಕರ ಶ್ರದ್ಧಾಕೇಂದ್ರವಾಗಿದೆ. ಇಲ್ಲಿ ಕಾರ್ಯನಿರತರಾಗುವ ಪ್ರತಿಯೊಬ್ಬ ಸೈನಿಕನು ಹಾಗೂ ಇತ್ತ ಬರುವ ಪ್ರವಾಸಿಗಳು ಮತ್ತು ಸ್ಥಳೀಯ ಜನರು ಬಾಬಾನ ಆಶೀರ್ವಾದ ಪಡೆಯಲು ಬರುತ್ತಾರೆ. ಕುಡಿಯುವ ನೀರನ್ನು ಬಾಟಲಿಯಲ್ಲಿ ತುಂಬಿಟ್ಟು ಬಾಬಾ ಮಂದಿರದಲ್ಲಿ ಮೂರು ದಿನಗಳವರೆಗೆ ಇಟ್ಟರೆ, ಅದರಲ್ಲಿ ಔಷಧಿಗುಣ ತುಂಬಿರುತ್ತದೆಯೆಂದು, ಅದನ್ನು 21 ದಿನಗಳವರೆಗೆ ಕುಡಿದಲ್ಲಿ ರೋಗ ನಿವಾರಣೆಯಾಗುವುದೆಂಬ ವಿಶ್ವಾಸ ಭಕ್ತರಲ್ಲಿದೆ. ಆದುದರಿಂದ ಈ ಮಂದಿರದಲ್ಲಿ ನೀರು ತುಂಬಿದ ಬಹಳಷ್ಟು ಬಾಟಲಿಗಳು ಕಂಡುಬರುತ್ತವೆ. ಆ ನೀರನ್ನು ಕುಡಿಯುವ ಭಕ್ತರಿಗೆ, 21 ದಿನ ಮಾಂಸಾಹಾರ ಹಾಗೂ ಮದ್ಯಪಾನ ನಿಷಿದ್ಧ.

ಪವಾಡಪುರುಷನಾಗಿ ಬಾಬಾ ಎನಿಸಿಕೊಂಡಿರುವ ಹರಭಜನ್ ಸಿಂಗ್, ಕುದುರೆ ಸವಾರಿ ಮಾಡುತ್ತ ಗಡಿ ರಕ್ಷಣೆ ಮಾಡುತ್ತಿರುವುದನ್ನು ಉಭಯ ಗಡಿಯ ಸೈನಿಕರೂ ಕಣ್ಣಾರೆ ಕಂಡಿದ್ದಾರೆಂದು ಹೇಳುತ್ತಾರೆ. ನಮ್ಮ ಭಾಗದ ಸೈನಿಕ, ಗಡಿಕಾವಲಿನ ತನ್ನ ಕರ್ತವ್ಯದಲ್ಲಿ ನಿರಾಸಕ್ತಿ ತೋರಿದಲ್ಲಿ ಅಂಥವರಿಗೆ ಬಾಬಾ ಕಪಾಳಮೋಕ್ಷ ಮಾಡಿ, ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಎಚ್ಚರಿಸುತ್ತಾನೆಂದು ಕೆಲವರು ಹೇಳುತ್ತಾರೆ. ■